Rega No M 1229 | 43rd Year | Sri 'Satyavadi' Mysore | 19—3—. 59

ಪ್ರಮುಖ ವರ್ತಮಾನಗಳಿಗೆ ,
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸ್ವಾಮಿಪ್ರಕಾರ— ಅಂಚೆಮನೆ ಸಂಸ್ಥೇದಾರ್ ಎ. ಎ ಸುಬ್ಬರಾಯುರು [ಬಿಡಿ ಪ್ರತಿಕ್ಕೆ

ಎನ್. ಜಿ. ಓ. ಗಳಿಗೆ ಮತೆ ತಾತ್ಕಾಲಿಕ ಪರಿಹಾರ ಕೊಡುವುದಿಲ

ನೆಹರು ಪ್ರವಾಸ

ಮಡ್ರಾಸು 17 — ಏಪ್ರಿಲು 14 ರಿಂದ 17 - ರವರೆಗೆ ಪಂ|| ನೆಹರು ಮದರಾಸು ಪ್ರಾಂತದ ಕೆಲವು ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು

ಮಂತ್ರಿಮಂಡಲಿಗೆ ವಿಧೇಯತೆ

ಬೆಂಗಳೂರು 18 — ಮಂತ್ರಿಗಳು ಹಾಕಿಕೊಡುವ ನೀತಿಯಂತೆ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳು ಸಡೆಯುತ್ತಿರುವರೆಂದು ಮುಖ್ಯ ಮಂತ್ರಿ ಶ್ರೀ ಬತ್ತಿ ವಿಧಾನಸಭೆಯಲ್ಲಿ ನುಡಿದರು

ರಾಜಕೀಯವಿಲ್ಲ

— ನವ ದೆಹಲಿ 18 — ಕಾಶ್ಮೀರದ ತಮ್ಮ ಭೆಟಿಯಲ್ಲಿ ರಾಜಕೀಯ ಉದ್ದಿಶ್ಯವೇನೂ ಇಲ್ಲವೆಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹ್ಯಾಮರ್ಶೋಲ್ಡ್ರು ನುಡಿದರು

ವರದಿ ಕೇಂದ್ರಕ್ಕೆ

ತಿರುವೇಂದ್ರಂ 18 — ಕಾಯ್ದೆ ಮಂತ್ರಿ ಶ್ರೀ ವಿ ಕೃಷ್ಣಯ್ಯರ್ ಹೇಳಿಕೆಯಿತ್ತು, ಚಂದನತೋಪು ಪೋಲೀಸು ಗೋಳೀಬಾರಿನ ಬಗ್ಗೆ ನ್ಯಾ|| ಶಂಕರರ ವರದಿಯನ್ನ ಕೇಂದ್ರಕ್ಕೆ ಕಳಿಸಿರುವುದಾಗಿ ತಿಳಿಸಿದರು

ಅನುಮತಿ ಅಗತ್ಯ

— ಮೈಸೂರು ರಾಜ್ಯಕ್ಕೆ ಅವಂದು ಮಾಕೊಳ್ಳಲ್ಪಡುವ ಅಕ್ಕಿಯನ್ನು ಕಂಟ್ರೋರ ಅನುಮತಿ ಪಡೆಯದೆ ಮಾರಲಾಗದು ಸರ್ಕಾರಿ ಪ್ರೆಸ್‌ನೋಟು ತಿಳಿಸುತ್ತದೆ.

× ಲಿಬ್ಬ 18— ನಿಯಾಫಾ ಎಂಬ ಪೋಡುಗೀಸು ಹಡಗು ಸಭಿ 1500 ಸೈನಿಕರು ಗೋವಾಕ್ಕೆ ಹೊಂಟಿರುವರು.

ಬೆಂಗಳೂರು 18 —ಮುಖ್ಯಮಂತ್ರಿ ಶ್ರೀ ಬಿ. ಡಿ ಜತ್ತಿಯವರು ಈ ದಿನ ವಿಧಾನ ಸಭೆಯಲ್ಲಿ ಹೇಳಿಕೆಯಿತ್ತು, ಮೈಸೂರಿನಲ್ಲಿ ನಾಕ್ ಗೆಜಿಟೆಡ್ ಅಧಿಕಾರಿಗಳಿಗೆ ಪ್ರಾಂತ ಮಾರುವಿಂಗಡನೆ ಸಂಬಂಧದಲ್ಲಿ ಶೇಕಡ 10 ಹಂಗಾಮಿ ಪರಿಹಾರ ಕೊಟ್ಟುದನ್ನು ನುತ್ತೆ ಕೊಡಲ್ಲಾಗುವುದಿಲ್ಲವೆಂದು ನುಡಿದರು ಅದು ಕೇವಲ ಹಂಗಾಮಿ ಕ್ರಮವೆಂದೂ, ಹೊಸ ವೇತನ ಜಾರಿಗೆ ಬಂದನಂತರ ಅದಿರುವದಿಲ್ಲವೆಂದು ನುಡಿದರು.

ಕೇರಳ ಮಂತ್ರಿ ಮೇಲೆ ಆರೋಪಣೆ

ತಿರುವೇಂದ್ರಂ 18 — ಶಿಕ್ಷಣದ ಬಗ್ಗೆ ಅಂದಾಜಪಟ್ಟಿ ಚರ್ಚೆ ಆಗುತ್ತಿದ್ದಾಗ ಕಾಂಗ್ರೆಸಿನ ಜಾರ್ಜ್ ಜೋಸೆಫ್ ವೊದಿಪಾರ ಮತ್ತು ಗೋಪಿನಾಥ ಪಿಳ್ಳೆ ಆರೋಪಮಾಡಿ, ಶಿಕ್ಷಣಮಂತ್ರಿ ಮುಂಡಾಸೆರಿಯವರು ಸೊಸೆ ಕಾಲೇಜಿಗೆ ನೂರುನಾಲ್ಕು ದಿನ ಹಾಜರಾಗಿದ್ದರೂ ಎಂ ಎ ಪರೀಕ್ಷೆಗೆ ಅಟೆಂಡೆನ್ಸು ದೊರೆತಿದೆ ಎಂದರು ಈ ಆರೋಪವನ್ನು ರುಜುವಾತು ಮಾಡುವಂತೆ ಶಿಕ್ಷಣಮಂತ್ರಿ ಸವಾಲು ಮಾಡಿದರು.

ತೀವ್ರ ಚಳುವಳಿ ಆಗಲಿ

ನವದೆಹಲಿ 18— ನಾಗಪುರ ನಿರ್ಣಾರವನ್ನು ಜಾರಿಗೆ ತರಲು ತೀವ್ರ ಚಳವಳಿ ನಡೆಸಲ್ಪಡಬೇಕೆಂದೂ ಪಂ || ನೆಹರು ಕರೆಯಿತ್ತಿರುವರು.

ನೌಕರರಿಗೆ ಸೂಚನೆ

ನವದೆಹಲಿ 16— ಮತಾಂತರ ವಿಚಾರಗಳಲ್ಲಿ ಸರ್ಕಾರಿ ನೌಕರರು ಕೈ ಹಾಕ ಕೂಡದೆಂದು ಸರ್ಕಾರಿ ಪ್ರಕಟನೆ ತಿಳಿಸುತ್ತದೆ.

ಒಪ್ಪಂದಕ್ಕೆ ಸಹಿ

ನವ ದೆಹಲಿ 18 — ಸಾರ್ವಜನಿಕ ಕಾನೂನು 480 ಮತ್ತು 665 ರ ಪ್ರಕಾರ ವ್ಯವಸಾಯ ಪದಾರ್ಥಗಳ ಅಮದಿನ ರೂ 100 ಕೋಟಿ ಲೆಕ್ಕದ ಒಗ್ಗೆ ಭಾರತ ಮತ್ತು ಅಮೇರಿಕಾ ಪ್ರತಿನಿಧಿಗಳು ಸಹಿ ಹಾಕಿದರು.

ಅವಿಶ್ವಾಸ ಸೂಚನೆ

ಲಕ್ನೊ 18 — ಉತ್ತರ ಪ್ರದೇಶ ಸ್ಪೀಕರರಾದ ಶ್ರೀ ಎ ಜಿ ಖೇರರ ಮೇಲೆ ವಿಧಾನ ಸಭೆಯ ಸೋಷಲಿಸ್ಟು ವಿರೋಧ ಪಕ್ಷದ ಉಪ ನಾಯಕರಾದ ಶ್ರೀ ರಾಮ ಸ್ವರೂಪ ವರ್ಮರು ಅವಿಶ್ವಾಸ ನಿರ್ಣಯ ಮಂಡಿಸಿರುವರು

ಬೋನಸ್ ಭರವಸೆ

ಪೂನಾ 18 — ಜೀವವಿಮಾ ಕಾರ್ಪೊರೇಷನ್ನಿನ ಅಧ್ಯಕ್ಷರಾದ ಶ್ರೀ ಪಿ. ಎ. ಗೋಪಾಲಕೃಷ್ಣರು ವಂದಿಗಾರರ ಸಂಗಡ ಮಾತನಾಡುತ್ತಾ, ಮುಂದೆ ಹತ್ತು ದಿವಸಲ್ಲಿ ಪಾಲಿಸಿದಾರರಿಗೆ ಬೋನಸ್ಸನ್ನು ಕೊಡುವ ಆಶಯ ವ್ಯಕ್ತಪಡಿಸಿದರು.

ಕೈರಾ ಎಚ್ಚರಿಕೆ

ಚಂಡೀಘರ 18 — ಮುಖ್ಯಮಂತ್ರಿ ಸರ್ದಾರ್ ಪ್ರತಾಪ್ ಸಿಂಗ್ ಕೈರಾ ಅಕಾಲಿ ಮತ್ತು ಕಮ್ಯುನಿಸ್ಟರಿಗೆ ಎಚ್ಚರಿಕೆಯನ್ನಿತ್ತು, ಮುಖ್ಯ ಗಡಿ ಪ್ರಾಂತವಾದ ಪಂಜಾಬಿನಲ್ಲಿ ಅಶಾಂತಿ ಎಬ್ಬಿಸುವದರ ವಿರುದ್ಧ ಕ್ರಮ ತೆಗೆದುಕೊಳ್ಳುವದಾಗಿ ತಿಳಿಸಿದರು.

— × —

ಬೊಂಬಾಯಿ ಪೌರಸಭೆ ನೌಕರರಿಗೆ ಹೆಚ್ಚು ವೇತನ ಸಿಕ್ಕಲಿದೆ

11 ಜನರ ಬಂಧನ

ನವ ದೆಹಲಿ 18 — ಈ ವರ್ಷ ಜನವರಿ 31 ಕ್ಕೆ ಅಂತ್ಯಗೊಳ್ಳುವ 7 ತಿಂಗಳಲ್ಲಿ ಕೇಂದ್ರ ಸರ್ಕಾರದ ಪೋಲೀಸು ಅಧಿಕಾರಿಗಳಲ್ಲಿ ಯಾರನ್ನೂ ಲಂಚರುಷುವತ್ತುಗಳ ಸಂಬಂಧದಲ್ಲಿ ಹಿಡಿದಿಲ್ಲವಾದರೂ 11 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ ಇದಕ್ಕೆ ಪ್ರತಿಯಾಗಿ ಕೇಂದ್ರ ಪೋಲೀಸಿನ 5359 ಮಂದಿಗೆ ಅಪರಾಧ ದಕ್ಷತೆ ಮತ್ತು ಪರಾಕ್ರಮಗಳಿಗಾಗಿ ಬಹುಮಾನಗಳು ನೀಡಲಾಗಿದೆ.

———

ಲಾಹವ್ರೆ 18— ಇಲ್ಲಿಯ ಪೌರಸಭಾಧ್ಯಕ್ಷತೆಯನ್ನು ಒಂದು ವೋಟು ಹೆಚ್ಚಿನಿಂದ ಸೋಷಲಿಸ್ಟರು ಪಡೆದು, ಕಮ್ಯುನಿಸ್ಟರು ಪರಾಜಿತರಾದರು ; ಇದರಿಂದ 1500 ಕಮ್ಯುನಿಸ್ಟರಿಗೂ 800 ಮಂದಿ ಪೋಲೀಸರಿಗೂ ಭೀಕರ ಹೊಡೆದಾಟ ನಡೆದು; ಕಡೆಗೆ ಪೋಲೀಸರು ಅಶ್ರುವಾಯು ಪ್ರಯೋಗಿಸಿ ಗುಂಪನ್ನು ಚದುರಿಸಿದರು

ಬೆಂಗಳೂರು 18— ವಿಧಾನಪರಿಷತ್ 11 ದಿವಸ ಬಿಡುವಿನೊಡನೆ ಮುಂದುವರಿ ಸಲಾಯಿತು; ಮಾರ್ಚಿ 30 ರಂದು ಮತ್ತೆ ಸೇರುವುದು

ನವ ದೆಹಲಿ 18 — 1958 ರಲ್ಲಿ 165 ಲಕ್ಷ ರೂಗಳ ಬೆಲೆ ಬಾಳುವ 1-05ಲಕ್ಷ ಟನ್ನುಗಳಷ್ಟು ಕಬ್ಬಿಣ ಮತ್ತು ಉಕ್ಕಿನ ಚೂರುಗಳನ್ನು ಜಪಾನಿಗೆ ರಫ್ತು ಮಾಡಲಾಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

20 ದಶಮಿ ಪುಷ್ಯ

ಭಾರತದಲ್ಲಿ ವಿದೇಶಿಯರು

ನವದೆಹಲಿ 17— ಭಾರತದಲ್ಲಿ ಕಳೆದ ವರ್ಷ ದಾಖಲಾತಿಯಾದ ವಿದೇಶೀಯರ ಸಂಖ್ಯೆ 37877 ರಿಂದ 47410 ವರೆಗೆ ಅಂದರೆ 10000 ಜನಸ್ಖ್ಯೆ ಹೆಚ್ಚಿದೆ

ಸಂಬಳ ಸಹಿತ ವಿರಾಮ

ನವದೆಹಲಿ 17— ಕೇರಳದಲ್ಲಿ ಕೈಗಾರಿಕಾ ಕಾರ್ಮಿಕರಿಗೆ ಮೇ ದಿನವು ಸಂಬಳ ಸಹಿತ ರಜಾದಿನವೆಂದು ಘೋಷಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಗಿದೆ.

ಯಂತ್ರ ಸಾಮಗ್ರಿ ಆಯಾತ

ನವದೆಹಲಿ 17— ಭಾರತವು ಪ್ರತಿವರ್ಷವೂ ಸುಮಾರು 10 ರಿಂದ 15 ಕೋಟಿ ರೂಗಳವರೆಗೆ ಬೆಲೆ ಬಾಳುವ ವಿವಿಧ ರೀತಿಯ ಯಂತ್ರ ಸಾಧನೆಗಳನ್ನು ವಿದೇಶಗಳಿಂದ ಆಯಾತಮಾಡಲಾಗುತ್ತಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು — ಅಮೇರಿಕಾದ ರಕ್ಷಣಾ ಶಾಖೆಯಲ್ಲಿ ಹೆಚ್ಚುವರಿ ಎನಿಸಿದ್ದ ದಾಸ್ತಾನಿನಿಂದ ಸುಮಾರು 4 ಕೋಟಿ ಗಳಷ್ಟು ಮೂಲ ಬೆಲೆ ಬಾಳುವ 2911 ಯಂತ್ರಸಾಧನೆಗಳನ್ನು ತರಿಸಿಕೊಳ್ಳಲು ಭಾರತ ಸರಕಾರದವರು ಬೇಡಿಕೆಯನ್ನಿತ್ತಿರುವರೆಂದೂ ತಿಳಿಸಲಾಯಿತು.

ಮ್ಯಾಕ್ಸಿಂ ಗಾರ್ಕಿ ಚಿತ್ರ

ನೊಪೋಸಿಬೀರ್ಸ್ಕ್ ಪುಸ್ತಕಾಲಯದ ಮೊದಲಲ್ಲಿ ಮ್ಯಾಕ್ಸಿಂ ಗೋರ್ಕಿಯವರ ಒಂದು ಅಸಾಧಾರಣ ಚಿತ್ರವಿದೆ ; ನೋಟಕ್ಕೆ ಅದು ರೇಖಾಚಿತ್ರದಂತಿದ್ದರೂ, ಸೂಕ್ಷ್ಮದರ್ಶಕದ ಮೂಲಕ ನೋಡಿದಲ್ಲಿ ಅದು ಸೂಕ್ಷ್ಮ ರೇಖೆಗಳಲ್ಲಿ ಗೋರ್ಕಿಯವರ ' ಮಾಟ್ವ್ಯೆ ' ಎಂಬ ಕತೆ ಕಂಡುಬರುತ್ತದೆ ; ಈ ಚಿತ್ರವನ್ನು ಕ್ಯಾಂತಿಗೆ ಮೊದಲೇ ಬರೆಯಲಾಗಿದೆಯೆಂದು ಅದು ಅಕ್ಷರ ಸಂಯೋಜನೆಯಿಂದ ತಿಳಿದುಬರುತ್ತದೆ

ಕೇಂದ್ರಕ್ಕೆ ಕರೆ

ನವದೆಹಲಿ 17— ಹೊರದೇಶಗಳಿಂದ ಬರುವ ಸ್ವಯಾಸಿಗಳು ಭಾರತದ ಜನರೊಂದಿಗೆ ಹೆಚ್ಚಿನ ಸಂಪರ್ಕ ಪಡೆಯಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರಕಾರಗಳ ಪ್ರವಾಸಿ ಇಲಾಖಾಧಿಕಾರಿಗಳಿಗೆ ಕೇಂದ್ರ ಸರ್ಕಾರದ ಸಂಚಾರ ಶಾಖೆ ಕಾರ್ಯದರ್ಶಿಗಳಾದವರು ಕರೆಯಿತ್ತಿದ್ದಾರೆ.

ಬ್ಯಾಂಡ್

ಮೈಸೂರು 18— ಬ್ಯಾಂಡು ಕಾರ್ಯಕ್ರಮ ಈ ರೀತಿ ಇರುವದೆಂದು ಮುನಿಸಿಪಲ್ ಕಮಿಷನರರು ತಿಳಿಸುತ್ತಾರೆ— ತಾ|| 21 ಶನಿವಾರ ಇಂಗ್ಲೀಷು ಬ್ಯಾಂಡು ನಿಷ್ಕಾತ್‌ಬಾಗ್ ; 22 ಭಾನುವಾರ ಕರ್ನಾಟಕ ಬ್ಯಾಂಡು ಎ ಎ ಪಂಡಿತರ ಪಾರ್ಕು ; 28 ಶನಿವಾರ ಇಂಗ್ಲೀಷು ಬ್ಯಾಂಡು ನಿಷತ್ಬಾಗ್ ; 29 ಭಾನುವಾರ ಕರ್ನಾಟಕ ಬ್ಯಾಂಡು ಚಲುವಾಂಬಾ ಪಾರ್ಕು.

ಮೊಹಲ್ಲ ಆಫೀಸ್

ಮೈಸೂರು 17— ತಾ|| 21 ಶನಿವಾರ ಬೆಳಿಗ್ಗೆ 8-30 ಕ್ಕೆ ವೀರನಗೆರೆ ಮಾರ್ಕೆಟ್ಟಿನಲ್ಲಿ ಮೊಹಲ್ಲಾ ಆಫೀಸನ್ನು ನಡೆಸಲು ಯೋಚಿಸಲಾಗಿದೆ ಎಂದು ಪೌರ ಸಭಾಧ್ಯಕ್ಷರು ತಿಳಿಸುತ್ತಾರೆ.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆ

ಮೈಸೂರು, ತಾ. 3-3-1959

ಟೆಂಡರ್ ನೋಟೀಸ್

ಸನ್ 1959-60 ನೇ ಸಾಲಿನಲ್ಲಿ ತಾ. 1-4-1959 ರಿಂದ 31-3-1960 ರ ವರೆಗೆ ಮೇಲ್ಕಂಡ ಇಲಾಖೆಯ ನಾಯಿಗಳ ಉಪಯೋಗಕ್ಕಾಗಿ ದಿನವಹಿ ಶುದ್ಧವಾದ ಕುರಿಮಾಂಸ, ಲಿವರ್ (Liver) ಕೋಳಿಮೊಟ್ಟೆ ಮತ್ತು ನಾನ್‌ರೊಟ್ಟಿ ಮುಂತಾದುವುಗಳನ್ನು ಸರಬರಾಯಿ ಮಾಡಲು ಆಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು ಒಂದು ಸೂರು ರೂಪಾಯಿ ಠೇವಣಾತಿಯೊಂದಿಗೆ ಮಾರ್ಚಿ ಮಾಹೆ **25-3-1959** ನೇ ಮಧ್ಯಾಹ್ನ **12** ಘಂಟೆಯೊಳಗಾಗಿ ಇಲಾಖಾ ಆಫೀಸರ್ ಇನ್‌ಚಾರ್ಜ್ ರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿಕೊಳ್ಳತಕ್ಕದ್ದು.

Krishna K R Capt.
Officer-in-charge
Palace Stables & Gajasala
Mysore

ಶಕ್ತಿ ಸುಧಾ

ಆತ್ಯುತ್ತಮ ಟಾನಿಕ್

ವುಡ್‌ಲ್ಯಾಂಡ್ 13-3-59 ರಿಂದ
ಶಿ ನ ಅಮೋಘ ಆರಂಭ

ಕಾಲಾಪಾನಿ (ಹಿಂದಿ)

ಆತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದ್ದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್

ಅಪೆರಾ—

ಅಮೋಘ ತೆಲುಗು ಚಿತ್ರ

14-3-59 ರಿಂದ
ಪ್ರತಿದಿನ 3 ಆಟಗಳು

ನಂತೋಷಂ

ಪಾತ್ರ— ಎನ್ ಟಿ ರಾಮರಾವ್, ಅಂಜಲಿ, ನಾಗೇಂದ್ರರಾವ್, ರೇಲಂಗಿ

Office of the Municipal Commissioner, City Municipal Council, Mysore.

Notification No. 234 - C.471 - 57 - 8 dated 9-3-1959.

Notice is hereby given to the inhabitants of the Municipality of Mysore that the Municipal Council desire to amend the Scheduled I to Octroi Bye-laws regarding the names of routes and the names of Octroi posts sanctioned in G. O. No. L. 9291 - 3121 - Ml. 71 - 37 - 69 dated 18th May 1938 and contained in page 113 of the Mysore City Municipal Rules and Bye-laws 1953 edition as below :—

— As Existing —

Serial No. of the Schedule	Names of Route	Name of Ookad and posts
9	.... Nanjangud Ookad	.... Nanjangud Road Ookad
10 m	.... do	.... Nachanahally Ookad

— As proposed —

9	.... Nanjangud Road	.... Nanjangud Road Ookad at Uttanahally cross
10	.... Deleted	

Any inhabitant of the Municipality objecting to the proposed amendment may within one month from the date of this notice send his objections in writing to the Municipal Council, who will consider the same at the next meeting after the expiry of the period of one month.

(Sd) **M. Vazeer Ahmad**
Municipal Commissioner

Edited, Printed & Published by Dharma Prachara Nasan M. Krishna Rao, at the Satyavadi Press Chamarajapuram, Mysore.